## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 701
2. ಮಾನ್ಯ ಸದಸ್ಯರ ಹೆಸರು : ಶ್ರೀ ದಿನೇಶ್ ಗೂಳಿಗೌಡ
3. ಉತ್ತರಿಸಬೇಕಾದ ದಿನಾಂಕ : 22.02.2022
4. ಉತ್ತರಿಸುವ ಸಚಿವರು : ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿಹಾಗೂ ಸಕ್ಕರೆ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಮಂಡ್ಯ ಜಿಲ್ಲೆಯ ಮೈಸೂರು ಸಕ್ಕರೆ ಕಾರ್ಖಾನೆಯನ್ನು ಯಾವಾಗ ಪ್ರಾರಂಭಿಸಲಾಗುವುದು; | ದಿ ಮೈಸೂರು ಶುಗರ್ ಕಂಪನಿ ಲಿ., ಮಂಡ್ಯ - ಈ ಕಾರ್ಖಾನೆಯನ್ನು 2 ವರ್ಷಗಳ ಅವಧಿಗೆ ಪ್ರಾಯೋಗಿಕವಾಗಿ ಸರ್ಕಾರಿ ಸ್ವಾಮ್ಯದಲ್ಲಿ ಪುನಶ್ಚೇತನಗೊಳಿಸಲು ದಿನಾಂಕ:18.10.2021 ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಸದರಿ ಸಭೆಯ ತೀರ್ಮಾನದಂತೆ ತಾಂತ್ರಿಕ ವರದಿಯನ್ನು ಪಡೆದು ಸಚಿವ ಸಂಪುಟದಲ್ಲಿ ಮಂಡಿಸಿ ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭ ಮಾಡುವ ಬಗ್ಗೆ ತೀರ್ಮಾನಿಸಲಾಗುವುದು. |
| (ಆ) | ಕಾರ್ಖಾನೆಯನ್ನು ಪ್ರಾರಂಭಿಸಲು ಪ್ರಸಕ್ತ 2022-23ನೇಯ ಆಯವ್ಯಯದಲ್ಲಿ ಹೆಚ್ಚಿನ ಅನುದಾನ ಬಿಡುಗಡೆಗೆ ಸರ್ಕಾರ ರೂಪುರೇಶೆಗಳನ್ನು ರೂಪಿಸಿದೆಯೇ; | ತಾಂತ್ರಿಕ ಸಮಿತಿಯು ಹಾಗೂ ಕನ್ಸಲ್ಟೆನ್ಸಿ ಸಂಸ್ಥೆಯು ನೀಡುವ ವರದಿಗಳನ್ನು ಆಧರಿಸಿ ಕಾರ್ಖಾನೆಯನ್ನು ಪ್ರಾರಂಭಿಸಲು ಅಗತ್ಯವಿರುವ ಅನುದಾನದ ಕುರಿತು ರೂಪುರೇಷೆಗಳನ್ನು ಸಿದ್ಧಪಡಿಸಲಾಗುವುದು. |
| (ಇ) | ಸದರಿ ಕಾರ್ಖಾನೆಯಿಂದ ಎಷ್ಟು ಮೆಟ್ರಿಕ್ ಟನ್ ಕಬ್ಬು ಅರೆಯುವ ಗುರಿ ಹೊಂದಿದೆ; | ಸ್ಥಾಪಿತ 5000 ಟಿ.ಸಿ.ಡಿ ಸಾಮರ್ಥ್ಯವನ್ನು ಪೂರ್ಣವಾಗಿ ಬಳಸಿಕೊಂಡು ಕಾರ್ಖಾನೆಯ ಮೀಸಲು ಕ್ಷೇತ್ರದಲ್ಲಿ ಲಭ್ಯವಾಗುವ ಅಂದಾಜು 7 ಲಕ್ಷ ಟನ್ ಕಬ್ಬನ್ನು ನುರಿಸುವ ದಿಸೆಯಲ್ಲಿ ಕಾರ್ಖಾನೆಯನ್ನು ಪುನಶ್ಚೇತನಗೊಳಿಸಲಾಗುವುದು. |
| (ಈ) | ಕಾರ್ಖಾನೆಯನ್ನು ಪುನರಾರಂಭಿಸಲು ಎಷ್ಟು ನೌಕರರ ಅವಶ್ಯಕತೆ ಇದೆ; | ತಾಂತ್ರಿಕ ಸಮಿತಿಯು ಹಾಗೂ ಕನ್ಸಲ್ಟೆನ್ಸಿ ಸಂಸ್ಥೆಯು ನೀಡುವ ವರದಿಗಳನ್ನು ಆಧರಿಸಿ ಕಾರ್ಖಾನೆಯನ್ನು ಪುನರ್ ಪ್ರಾರಂಭಿಸಲು ಅಗತ್ಯವಿರುವ ನೌಕರರ ಸಂಖ್ಯೆಯನ್ನು ನಿರ್ಧರಿಸಲಾಗುವುದು. |
| (ಉ) | ಕಾರ್ಖಾನೆಯ ಪುನಃಶ್ಚೇತನಕ್ಕಾಗಿ ರಚಿಸಲಾಗಿದ್ದ ಟೆಕ್ನಿಕಲ್ ಕಮಿಟಿಯು ಸರ್ಕಾರಕ್ಕೆ ವರದಿಯನ್ನು ನೀಡಿದೆಯೇ; (ನೀಡಿದ್ದಲ್ಲಿ, ವಿವರಗಳನ್ನು ಒದಗಿಸುವುದು); | ಸರ್ಕಾರದ ಆದೇಶ ಸಂಖ್ಯೆ: ಸಿಐ 326 ಸಿಓಎಫ್ 2021 ದಿನಾಂಕ:02.12.2021ರಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000 ರಡಿಯಲ್ಲಿ 14 ದಿನಗಳ ಅಲ್ಪಾವಧಿ ಟೆಂಡರ್ ಕರೆದು ಕನ್ಸಲ್ಟೆನ್ಸಿ ಸೇವೆಯನ್ನು ಪಡೆಯಲು ಆದೇಶಿಸಿದೆ.<br><br>ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: MSCO/AC/CFO/147/2021-22, ದಿನಾಂಕ: 31.12.2021 ರಂದು ತಾಂತ್ರಿಕ ವರದಿಯನ್ನು ತಯಾರಿಸಲು ಕನ್ಸಲ್ಟೆನ್ಸಿ ಸೇವೆಯನ್ನು ಪಡೆಯಲು 14 ದಿನಗಳ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಲಾಗಿತ್ತು. ಆದರೆ ಈ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಟೆಂಡರ್ ಗಳು ಸ್ವೀಕೃತಗೊಂಡಿರುವುದಿಲ್ಲ.<br><br>ಮರು ಟೆಂಡರ್ ಆಹ್ವಾನಿಸಲು ಸಮಯದ ಅಭಾವವಿರುವುದರಿಂದ ಸಕ್ಕರೆ ಉದ್ದಿಮೆಗಳಿಗೆ ತಾಂತ್ರಿಕ ವರದಿಯನ್ನು ತಯಾರಿಸುವ ಕನ್ಸಲ್ಟೆನ್ಸಿ ಸಂಸ್ಥೆಗಳಿಂದ ಸೇವೆಯನ್ನು ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕ ಅಧಿನಿಯಮ 1999 ರಡಿಯಲ್ಲಿ 4ಜಿ ವಿನಾಯಿತಿ ಪಡೆಯುವ ಸಂಬಂಧ ಆರ್ಥಿಕ ಇಲಾಖೆಯಲ್ಲಿ ಪರಿಶೀಲನಾ ಹಂತದಲ್ಲಿರುತ್ತದೆ. |
| (ಊ) | ಪ್ರಸಕ್ತ ಸಾಲಿನಲ್ಲಿ ಕಾರ್ಖಾನೆಗೆ ಮೀಸಲಿಟ್ಟಿರುವ ಹಣ ಎಷ್ಟು? | 2021-22ನೇ ಸಾಲಿನ ಆಯವ್ಯಯದಲ್ಲಿ ಮೈಸೂರು ಸಕ್ಕರೆ ಕಂಪನಿಗೆ ಯಾವುದೇ ಹಣ ಹಂಚಿಕೆಯಾಗಿರುವುದಿಲ್ಲ. |

ಸಂಖ್ಯೆ: ಸಿಐ 42 ಸಿಓಎಫ್ 2022

(ಶಂಕರ.ಬ.ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು